ಪುರುಸೊತ್ತಿಲ್ಲದಿದ್ದರೂ ಗಂಡನನ್ನ ಆಕ್ಷೇಪಿಸಲು ಮಾಮಿ ಮರೆಯಲಿಲ್ಲ. 'ಬಾರಪ್ಪಾ... ಕೂತ್ಕೋ' ತಮ್ಮ ಪಕ್ಕದಲ್ಲಿ ಸೋಫಾದಲ್ಲಿ ಜಾಗ ತೋರಿಸಿದ ಮೆನನ್ನೆ '...ಅಯ್ಯೋ ಅಂಕಲ್, ನಿಮಗೆ ಸುಮ್ನೆ ತೊಂದರೆ. ವಿದೇಶಕ್ಕೆ ಹೊರಟಿದೀರ; ಸಾಮಾನು, ಕಾಗದಪತ್ರ ಎಲ್ಲಾ ಸಾವರಿಸಿಕೊಳ್ಬೇಕು. ಶುಭಪ್ರಯಾಣ ಹೇಳಿಹೋಗೋಣ ಅಂತ ಬಂದೆ. ನಿಮ್ಮ ಕೆಲಸ ಮಾಡ್ಕೊಳಿ...' ಅಂದ ಸುಧೀರ ನಿಂತುಕೊಂಡ. 'ಅಯ್ಯೋ ಬಿಡೀಪಾ...ಅದೇನು ಮಹಾ! ಅಮೆರಿಕಕ್ಕೆ ಇದು ಎರಡ್ನೇ ಸಾರಿ. ಅದೂ ಮೂರು ತಿಂಗಳಮಟ್ಟಿಗೆ. ಮೊದ್ಲು ಜೋರ್ಡಾನ್‌ನಲ್ಲಿ ಇರಲಿಲ್ವಾ ನಾಲ್ಕು ವರ್ಷ? ಹೌದು ಅಂದ್ಹಾಗೆ, ನಿನ್ನೆ ಹಳೇ ಸೂಟುಕೇಸ್‌ನಲ್ಲಿ ಜೋರ್ಡಾನಿನಲ್ಲಿದ್ದಾಗಿನ ಫೋಟೋಗಳು ಸಿಕ್ವು. ತೋರಿಸ್ತೀನಿ ಬಾ ಕೂತ್ಕೋ' ಅಂದವರು ಸಾಮಾನು ಸೂಟುಕೇಸುಗಳ ಮಧ್ಯೆ ದಾರಿ ಮಾಡಿಕೊಳ್ಳುತ್ತಾ ಎಡವುತ್ತಾ ರೂಮಿಗೆ ಧಾವಿಸಿದರು. ಮಾಮಿ ಸುಧೀರನತ್ತ ನೋಡಿ ಆಯ್ತು ಇನ್ನು ಜೋರ್ಡಾನ್ ಸುಳಿಯಲ್ಲಿ ಸಿಕ್ಕುಬಿದ್ದೆ ಅನ್ನುವಂತೆ ನಕ್ಕರು.

ಕೇರಳದ ಕಣ್ಣೂರು ಹತ್ತಿರದ ತಳಿಪ್ಪರಂಬ ಅಚ್ಯುತ ಮೆನನ್ನರ ಊರು. ಅರವತ್ತರ ದಶಕದಲ್ಲಿ ಬೆಂಗಳೂರಿಗೆ ಬಂದು ಐಟಿಐ ಕಾರ್ಖಾನೆಯಲ್ಲಿ ಸೇರಿದ್ದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸರಕಾರಿ ಉದ್ಯಮಗಳು ಉಚ್ಛ್ರಾಯದಲ್ಲಿದ್ದ ಕಾಲ. ದೂರಸಂಪರ್ಕದಲ್ಲಿ ತೀವ್ರಗತಿಯ ಪ್ರಗತಿಯಾಗಲು ಸುರುವಾಗಿತ್ತು. ಜೋರ್ಡಾನ್ ದೇಶದಲ್ಲಿ ದೂರಸಂಪರ್ಕ ಇಲಾಖೆಯ ದೊಡ್ಡಗುತ್ತಿಗೆ ಐಟಿಐಗೆ ಸಿಕ್ಕಿತು. ನೈನಿ ಮತ್ತು ಬೆಂಗಳೂರು ಶಾಖೆಗಳಿಂದ ಜೋರ್ಡಾನಿಗೆ ಕಳಿಸಿದ ತಂತ್ರಜ್ಞರ ಪಂಗಡದಲ್ಲಿ ಅಚ್ಯುತ ಮೆನನ್ ಕೂಡ ಇದ್ದರು. ನಾಲ್ಕುವರ್ಷ ಅಲ್ಲಿ ಕೆಲಸ ಮಾಡಿ ಮರಳಿ ಬೆಂಗಳೂರಿಗೆ ಬಂದ ಮೇಲೆ ಮದುವೆಯಾಗಿದ್ದರು. ಹೆಂಡತಿ ಶಾಲಾಶಿಕ್ಷಕಿ. ಮದುವೆಯಾಗಿ ಹತ್ತುವರ್ಷದ ನಂತರ ಹುಟ್ಟಿದ ಹೆಣ್ಣುಮಕ್ಕಳು ಸತ್ಯಭಾಮಾ ಮತ್ತು ರುಕ್ಮಿಣಿ. ಅಪ್ಪನ ಹಾದಿಯಲ್ಲೇ ನಡೆದು ಎಂಜಿನಿಯರಿಂಗ್ ಓದಿ ಮದುವೆಯಾಗಿ ಇಬ್ಬರೂ ಅಮೆರಿಕ ಸೇರಿದ್ದರು. ಅವರೇ ಈಗ ಅಮೆರಿಕದಲ್ಲಿ ಸ್ವ್ಯಾಟಿ ಮತ್ತು ರೂನಿ. ಮೆನನ್ ಒಂದು ದಪ್ಪ ಅಲ್ಬಮ್ಮನ್ನು ಹೊತ್ತು ತರುವುದು ಕಂಡು ಕಸಿವಿಸಿಪಟ್ಟ ಸುಧೀರ. 'ಅಂಕಲ್, ಇವತ್ತು ರಾತ್ರಿ ನೀವು ಪ್ರಯಾಣ ಹೊರಡ್ಬೇಕು; ಕೆಲ್ಸ ಇರುತ್ತೆ, ಅಲ್ಬಮ್ ಮನೇಲಿ ನೋಡ್ತೀನಿ ಕೊಟ್ಬಿರಿ...' ಅಂದ. 'ಅಯ್ಯೋ ಬಿಡಪ್ಪ! ಸೂಟುಕೇಸೆಲ್ಲಾ ತಯಾರಾಗಿದೆ. ಔಷಧ, ಮಾತ್ರೆ ಮುಂತಾದ್ದೆಲ್ಲಾ ಹಾಕಿಟ್ಕೊಂಡಿದೀನಿ. ಒಂಬತ್ತು ಗಂಟೆಗೆ ಓಲಾ ಕ್ಯಾಬಿಗೆ ಬುಕ್ ಮಾಡ್ಕೊಂಡ್ರೆ ಸಾಕು. ಇನ್ನೂ ಮೂರುತಾಸಿದೆ, ನಂಗಿನ್ನೇನು ಕೆಲ್ಸ ಇಲ್ಲಿ? ಇವ್ರೆಲ್ಲಾ ಮಾಡ್ಕೋತಾರೆ...' ಅನ್ನುತ್ತಾ ಅಲ್ಬಂ ತೆರೆದರು.

'ಸುಧೀರ ಒಂದುಕಪ್ಪು ಕಾಫಿ ತರ್ತೀನಿ ಇರು...' ಮಾಮಿ ಹಿಡಿದುಕೊಂಡ ಸೊಂಟವನ್ನು ನೆಟ್ಟಗೆ ಮಾಡಿಕೊಳ್ಳುತ್ತಾ ಏಳತೊಡಗಿದರು. ಗಂಡ ಇನ್ನೊಂದು ತಾಸು ಬಿಡುವುದಿಲ್ಲ ಅಂತ ಅವರಿಗೆ ಗೊತ್ತಿತ್ತು. ತೀವ್ರ ಮುಜುಗರದಿಂದ 'ಬೇಡ ಮಾಮಿ, ಈಗ ನೀವು ಮೊದಲು ಕೆಲಸ ಮುಗಿಸಿಕೊಳ್ಳಿ' ಅನ್ನುತ್ತಿದ್ದಂತೆ ಸತ್ಯಭಾಮಾ 'ಇರು ಅಮ್ಮ, ನಾನು ಮಾಡ್ತೀನಿ' ಅಂತ ಅಡುಗೆಕೋಣೆಗೆ ಹೊರಟಳು. 'ನಂಗೂ ಒಂದು ಕಪ್ಪು ಪುಟ್ಟಾ' ಅಂದರು ಮೆನನ್. ತನ್ನ ತೊಡೆಮೇಲೆ ತಟ್ಟಿ ಅವರು ತೋರಿಸಿದ ಫೋಟೊದತ್ತ ನೋಡಿದ ಸುಧೀರ. ಅರಬರದೇ ಪೋಷಾಕು ಧರಿಸಿ ತಮಗಿಂತ ಒಂದೂವರೆ ಅಡಿ ಎತ್ತರವಿದ್ದ ಅರಬನೊಬ್ಬನೊಟ್ಟಿಗೆ ನಿಂತಿದ್ದರು ಮೆನನ್. 'ಇವರು ಜೋರ್ಡಾನಿನ ಟೆಲಿಕಮ್ಯುನಿಕೇಶನ್ನಿಗೆ ಎರಡನೆ ಚೀಫ್ ಕಣಯ್ಯ. ಅಮ್ಮಾನ್